# ಕರ್ನಾಟಕ ಸರ್ಕಾರದ ನಡವಳಿ

**ವಿಷಯ :** ಗ್ರಾಮ ಪಂಚಾಯಿತಿಗಳಲ್ಲಿ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರಗಳ 'ಅರಿವು ಕೇಂದ್ರ' ಗಳಿಗೆ ಪುಸ್ತಕ ಖರೀದಿ ಮೂಲಸೌಕರ್ಯ ಅಭಿವೃದ್ಧಿ, ಶುಚಿಗಾರರ ಭತ್ಯೆ ಸಾಧಿಲ್ವಾರು ವೆಚ್ಚ ಹಾಗೂ ಇತರೆ ವೆಚ್ಚಗಳನ್ನು ಭರಿಸುವ ಕುರಿತು.

**ಓದಲಾದ:** 1. ಸರ್ಕಾರದ ಆದೇಶ ಸಂಖ್ಯೆ: ಇಡಿ 64 ಎಲ್ಐವಿ 2015, ದಿನಾಂಕ: 26.02.2019.

2. ಆರ್ಥಿಕ ಇಲಾಖೆ ಹಿಂಬರಹ ಪತ್ರ ಸಂಖ್ಯೆ: ಆಇ 917 ವೆಚ್ಚ 06 2022, ದಿನಾಂಕ: 27.07.2023

3. ಕಡತದ ಟಿಪ್ಪಣಿಯ ಕಂಡಿಕೆ 79 & 80 ರಲ್ಲಿ ಅನುಮೋದಿಸಿರುವಂತೆ.

*****

**ಪ್ರಸ್ತಾವನೆ**

ಮೇಲೆ ಓದಲಾದ (1) ರ ಸರ್ಕಾರದ ಆದೇಶಗಳಲ್ಲಿ ಗ್ರಾಮ ಪಂಚಾಯಿತಿ ಗ್ರಂಥಾಲಯಗಳ ನಿರ್ವಹಣೆಯನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮೂಲಕ ಗ್ರಾಮ ಪಂಚಾಯಿತಿಗಳಿಗೆ ವರ್ಗಾಯಿಸಿ ಆದೇಶಿಸಲಾಗಿದೆ. ಸದರಿ ಆದೇಶದಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಅಧೀನದಲ್ಲಿರುವ ಗ್ರಾಮ ಪಂಚಾಯಿತಿ ಗ್ರಂಥಾಲಯಗಳ ಸಂಪೂರ್ಣ ನಿರ್ವಹಣೆಯನ್ನು ದಿನಾಂಕ:01.03.2019 ರಿಂದ ಜಾರಿಗೆ ಬರುವಂತೆ ಗ್ರಾಮ ಪಂಚಾಯಿತಿಗಳಿಗೆ ವರ್ಗಾಯಿಸಲಾಗಿರುತ್ತದೆ.

ಓದಲಾದ (2) ರ ಹಿಂಬರಹದಲ್ಲಿ ಆರ್ಥಿಕ ಇಲಾಖೆಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಬರುವ ಗ್ರಾಮ ಪಂಚಾಯತಿ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರಗಳಿಗೆ ಪುಸ್ತಕ ಖರೀದಿ, ಮೂಲಸೌಕರ್ಯ ಅಭಿವೃದ್ಧಿ ಶುಚಿಗಾರರ ಭತ್ಯೆ, ಸಾಧಿಲ್ವಾರು ವೆಚ್ಚ ಹಾಗೂ ಇತರೆ ವೆಚ್ಚಗಳನ್ನು ಭರಿಸಲು ಅನುದಾನ ಒದಗಿಸುವುದಕ್ಕೆ ಸಂಬಂಧಿಸಿದಂತೆ 2023-24 ನೇ ಸಾಲಿನ ಜುಲೈ ತಿಂಗಳ ಆಯವ್ಯಯದಲ್ಲಿ ಗ್ರಾಮ ಪಂಚಾಯಿತಿಯಲ್ಲಿನ ಗ್ರಂಥಾಲಯಗಳ ನಿರ್ವಹಣೆಗೆ ಲೆಕ್ಕ ಶೀರ್ಷಿಕೆ: 2205-00-105-0-16 ರಡಿ ರೂ.500.00 ಲಕ್ಷಗಳನ್ನು ಒದಗಿಸಲಾಗಿರುತ್ತದೆ.

ಓದಲಾದ (3) ರನ್ವಯ 2023-24 ನೇ ಸಾಲಿನ ಜುಲೈ ತಿಂಗಳ ಆಯವ್ಯಯದಲ್ಲಿ ಗ್ರಾಮ ಪಂಚಾಯಿತಿಯಲ್ಲಿನ ಗ್ರಂಥಾಲಯಗಳ ನಿರ್ವಹಣೆಗೆ ಲೆಕ್ಕ ಶೀರ್ಷಿಕೆ: 2205-00-105-0-16 ರಡಿ ₹ 500.00 ಲಕ್ಷಗಳನ್ನು ಒದಗಿಸಲಾಗಿದ್ದು, ರಾಜ್ಯದ ಒಟ್ಟು 5827 ಗ್ರಾಮ ಪಂಚಾಯಿತಿಗಳಲ್ಲಿನ 5895 ಗ್ರಾಮ ಪಂಚಾಯತಿ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರಗಳಿಗೆ ಪುಸ್ತಕ ಖರೀದಿ, ಮೂಲಸೌಕರ್ಯ ಅಭಿವೃದ್ಧಿ, ಶುಚಿಗಾರರ ಭತ್ಯೆ, ಸಾಧಿಲ್ವಾರು ವೆಚ್ಚ ಹಾಗೂ ಇತರೆ ವೆಚ್ಚಗಳನ್ನು ಭರಿಸಲು ಅನುದಾನ ಒದಗಿಸುವುದಕ್ಕೆ ಅನುದಾನ ಕೋರಲಾಗಿದ್ದು, ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 02 ಟಿಎಫ್‌ಪಿ 2023 ದಿ: 04.04.2023 ಮತ್ತು 31.07.2023ರ ಅನುಸಾರ ರೂ.3.33 ಕೋಟಿಗಳು ಬಿಡುಗಡೆ ಮಾಡಬಹುದಾಗಿದೆ ಎಂದು ಅನುಮೋದಿಸಲಾಗಿರುತ್ತದೆ.

ಅದರಂತೆ, 2023-24ನೇ ಸಾಲಿನ ಜುಲೈ ತಿಂಗಳ ಆಯವ್ಯಯದಲ್ಲಿ ಗ್ರಾಮ ಪಂಚಾಯಿತಿಗಳಲ್ಲಿನ ಗ್ರಂಥಾಲಯಗಳ ನಿರ್ವಹಣೆಗೆ ಲೆಕ್ಕ ಶೀರ್ಷಿಕೆ: 2205-00-105-0-16 ರಡಿ ಒದಗಿಸಲಾಗಿರುವ ₹ 333.00 ಲಕ್ಷಗಳ (ಮೂರು ನೂರಾ ಮೂವತ್ತೂರು ಲಕ್ಷಗಳು ಮಾತ್ರ) ಅನುದಾನವನ್ನು ಪ್ರತಿ ಗ್ರಾಮ ಪಂಚಾಯಿತಿ ಗ್ರಂಥಾಲಯ ಮಾಹಿತಿ ಕೇಂದ್ರ 'ಅರಿವು ಕೇಂದ್ರ'ಗಳಿಗೆ

ದಿನಪತ್ರಿಕೆ/ಮಾಸಪತ್ರಿಕೆ/ನಿಯತಕಾಲಿಕೆಗಳ ಖರೀದಿಗೆ ಪ್ರತಿ ಮಾಹೆಗೆ ಗರಿಷ್ಠ ₹1000/-ಗಳಿಗೆ ಸೀಮಿತಗೊಳಿಸಿ ವೆಚ್ಚ ಭರಿಸಲು ಅನುದಾನ ಬಿಡುಗಡೆಗೆ ಸರ್ಕಾರವು ತೀರ್ಮಾನಿಸಿದೆ.

ಆದ್ದರಿಂದ ಈ ಕೆಳಕಂಡಂತೆ ಆದೇಶ

**ಆದೇಶ ಸಂಖ್ಯೆ:ಕಪಂರಾಆ/ಅಭಿವೃದ್ಧಿ/ಗ್ರಂಥಾಲಯ/388/2022**

**ಬೆಂಗಳೂರು , ದಿನಾಂಕ: 05.12.2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ 2023-24 ನೇ ಸಾಲಿನ ಜುಲೈ ತಿಂಗಳ ಆಯವ್ಯಯದಲ್ಲಿ ಗ್ರಾಮ ಪಂಚಾಯಿತಿಗಳಲ್ಲಿನ ಗ್ರಂಥಾಲಯಗಳ ನಿರ್ವಹಣೆಗೆ ಲೆಕ್ಕ ಶೀರ್ಷಿಕೆ: 2205-00-105-0-16 ರಡಿ ₹ 333.00 ಲಕ್ಷಗಳನ್ನು ಒದಗಿಸಲಾಗಿದ್ದು ಅದರಂತೆ ಪ್ರಸ್ತುತ ರಾಜ್ಯದ ಒಟ್ಟು 5827 ಗ್ರಾಮ ಪಂಚಾಯಿತಿಗಳಲ್ಲಿನ 5895 ಗ್ರಾಮ ಪಂಚಾಯತಿ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರ 'ಅರಿವು ಕೇಂದ್ರ'ಗಳಿಗೆ ದಿನಪತ್ರಿಕೆ/ಮಾಸಪತ್ರಿಕೆ/ ನಿಯತಕಾಲಿಕೆಗಳ ಖರೀದಿಗೆ ಪ್ರತಿ ಮಾಹೆಗೆ ಗರಿಷ್ಠ ₹ 1000/- ಗಳಿಗೆ ಸೀಮಿತಗೊಳಿಸಿ ಅಕ್ಟೋಬರ್, 2023 ರಿಂದ ಮಾರ್ಚ್, 2024 ವರೆಗೆ ಒಟ್ಟು 6 ತಿಂಗಳಿಗೆ **ಪ್ರತಿ ಗ್ರಾಮ ಪಂಚಾಯಿತಿ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರ 'ಅರಿವು ಕೇಂದ್ರ'ಕ್ಕೆ ₹ 5648/- (ಐದು ಸಾವಿರದ ಆರುನೂರಾ ನಲವತ್ತೆಂಟು ರೂಪಾಯಿಗಳು ಮಾತ್ರ)** ಗಳನ್ನು ಗ್ರಾಮ ಪಂಚಾಯಿತಿಗಳಿಗೆ ಅನುಬಂಧದಲ್ಲಿ ಇರುವಂತೆ ಒಟ್ಟು 5827 ಗ್ರಾಮ ಪಂಚಾಯಿತಿಗಳಲ್ಲಿನ 5895 ಗ್ರಾಮ ಪಂಚಾಯತಿ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರ 'ಅರಿವು ಕೇಂದ್ರ'ಗಳಿಗೆ **ಖಜಾನೆ-2ನ BMS** ಮುಖಾಂತರ ಆಯಾ ಗ್ರಾಮ ಪಂಚಾಯಿತಿಯ ಶಾಸನಬದ್ಧ ಅನುದಾನದ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಬಿಡುಗಡೆಗೊಳಿಸುವಂತೆ ಆರ್ಥಿಕ ಅಧಿಕಾರಿ, ಲೆಕ್ಕಪತ್ರ ಶಾಖೆ, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 02 ಟಿಎಫ್‌ಪಿ 2023 ದಿನಾಂಕ: 04.04.2023 ಮತ್ತು 31.07.2023ರ ಆದೇಶಾನುಸಾರ ಹೊರಡಿಸಲಾಗಿದೆ.

**(ಮಾನ್ಯ ಆಯುಕ್ತರಿಂದ ಟಿಪ್ಪಣಿ ಅನುಮೋದಿತ)**

ನಿರ್ದೇಶಕರು(ಅಭಿವೃದ್ಧಿ)
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ,
ಬೆಂಗಳೂರು.

**ಇವರಿಗೆ:**

1. ಮಹಾಲೇಖಪಾಲರು ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
4. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
5. ನಿರ್ದೇಶಕರು(ಅಭಿವೃದ್ಧಿ), ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು
6. ಆರ್ಥಿಕ ಅಧಿಕಾರಿ (ಹಣಕಾಸು), ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
7. ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.
8. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ., ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.

9. ಮುಖ್ಯ ವ್ಯವಸ್ಥಾಪಕರು, ಭಾರತೀಯ ಸ್ಟೇಟ್ ಬ್ಯಾಂಕ್ ವಿಧಾನಸೌಧ ಶಾಖೆ, ಬೆಂಗಳೂರು.

10. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳು.

11. ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳು (ಆಯಾ ತಾಲ್ಲೂಕು ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಿಗೆ ಈ ಆದೇಶದ ಪ್ರತಿಯನ್ನು ತಲುಪಿಸುವ ವ್ಯವಸ್ಥೆ ಮಾಡುವಂತೆ ಸೂಚಿಸಲಾಗಿದೆ).

12. ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

13. ಮಾಹಿತಿ ಕೇಂದ್ರ/ವೆಬ್‌ಸೈಟ್, ಗ್ರಾಅಪ ಇಲಾಖೆ.

14. ಮಾಹಿತಿ ಕೇಂದ್ರ/ವೆಬ್ ಸೈಟ್, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.

<u>ಪ್ರತಿಯನ್ನು:</u>

1. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ-6, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
2. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ನಿರ್ದೇಶಕರು, ಯೋಜನಾ ಉಸ್ತುವಾರಿ ಮತ್ತು ಮಾಹಿತಿ ವಿಭಾಗ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಹೆಚ್ಚುವರಿ ಪ್ರತಿ/ಶಾಖಾ ರಕ್ಷಾ ಕಡತಕ್ಕೆ